




# ಕಪ್ಪು–ಬಿಳುಪಿನ ಲೋಕ

ಚಿತ್ರ– ಬರಹ:
**ಕೃಷ್ಣ ಪ್ರಶಾಂತ್ ವಿ. ಗೇರುಕಟ್ಟೆ**

ಬಣ್ಣಗಳ ಪೈಕಿ ಸರಳ ಸುಂದರ ಭಾವನೆಯನ್ನು ವ್ಯಕ್ತಪಡಿಸುವ ಶಕ್ತಿಯಿರುವ ಕಪ್ಪು ಬಿಳುಪಿಗೂ ಬದುಕಿಗೂ ಬಹಳಷ್ಟು ನಂಟು!

ಹವ್ಯಾಸಿ ಛಾಯಾಗ್ರಾಹಕನಾದ ನನಗೆ ಸುಮಾರು ಎರಡು ವರ್ಷದಿಂದೀಚೆ ಮೋನೋಕ್ರೋಮ್ (ಕಪ್ಪು – ಬಿಳುಪು ಚಿತ್ರಗ್ರಹಣ) ಫೋಟೋಗ್ರಫಿ ಅಚ್ಚುಮೆಚ್ಚು. ಮೋನೊಕ್ರೋಮ್ ಚಿತ್ರಗಳ ಬಗ್ಗೆ ತಿಳಿಯುವ ಮೊದಲು ಅವುಗಳ ಬಗ್ಗೆ ಸಾಧಾರಣ ನಿಲುವು ತಾಳಿದ್ದೆ. ‘ಬರಿ ಕಪ್ಪು ಬಿಳುಪಿನ ಚಿತ್ರದಲ್ಲೇನಿದೆ? ಚಿತ್ರ ವಿವಿಧ ಬಣ್ಣಗಳಿಂದ ಕೂಡಿದ್ದರೇ ಅಂದ’ ಎಂಬ ಭಾವನೆ ಇತ್ತು. ನಂತರ ದಿನೇ ದಿನೇ ಫೋಟೋಗ್ರಫಿಯ ವಿವಿಧ ಆಯಾಮಗಳ ಬಗ್ಗೆ ತಿಳಿಯುತ್ತಾ ಹೋದಂತೆ ಕಪ್ಪು–ಬಿಳುಪು ಚಿತ್ರಗಳ ಮಹತ್ವ ಅರಿವಾಯಿತು. ಕಪ್ಪು– ಬಿಳುಪು ಚಿತ್ರಗಳಿಗೆ ವಯಸ್ಸಾಗದು. ವರ್ಷಗಳು ಕಳೆದರೂ ಅವು ಛಾಯಾಗ್ರಾಹಕರ ಪಾಲಿಗೆ ಶ್ರೇಷ್ಠವೇ.

ಮನುಷ್ಯನ ಮುಖದಲ್ಲಿನ ರೇಖೆಗಳು ಮತ್ತು ಹಾವಭಾವಗಳನ್ನು ಅತ್ಯಂತ ಹತ್ತಿರದಿಂದ ಕಪ್ಪು ಬಿಳುಪು ವರ್ಣಚಿತ್ರದ ಆಯ್ಕೆಯನ್ನು ಕೆಮರಾದಲ್ಲಿ ಸಂಯೋಜಿಸಿ ಸೆರೆ ಹಿಡಿಯುವುದು ಅತ್ಯಂತ ಉತ್ಸಾಹದ ಕೆಲಸ. ಮನುಷ್ಯನ

**(8ನೇ ಪುಟ ನೋಡಿ)**